## ಅಭ್ಯರ್ಥಿಗಳು ಅನ್‌ಲೈನ್ ಅರ್ಜಿ ಭರ್ತಿ ಮಾಡುವ ಮೊದಲು ಅವಶ್ಯಕ ಸೂಚನೆಗಳು:

- ಅರ್ಜಿ ಭರ್ತಿ ಮಾಡುವ ಮೊದಲು ಅಧಿಸೂಚನೆಯನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಳ್ಳುವುದು.
- ಇತ್ತೀಚಿನ ಪಾಸ್ ಪೋರ್ಟ್ ಆಳತೆಯ ಭಾವ ಚಿತ್ರ, ಎಡಗೈ ಹೆಬ್ಬರಳ ಗುರುತು ಹಾಗೂ ಸಹಿಯನ್ನು ಪ್ರತ್ಯೇಕವಾಗಿ ಸ್ಕ್ಯಾನ್ ಮಾಡಿ .jpg file format ನಲ್ಲಿ save ಮಾಡಿ, 150 kb ಗಿಂತ ಕಡಿಮೆ ಗಾತ್ರದಲ್ಲಿ ಅಪ್‌ಲೋಡ್ ಮಾಡುವುದು. ಭಾವ ಚಿತ್ರ ಅಪ್‌ಲೋಡ್ ಮಾಡುವ ಮೊದಲು ಭಾವ ಚಿತ್ರವು ತನ್ನದೇ ಎಂದು ಖಾತ್ರಿ ಪಡಿಸಿಕೊಳ್ಳುವುದು.
- ಮೇಲೆ ತಿಳಿಸಿರುವ ಅಡಕಗಳನ್ನು ಸ್ಪಷ್ಟವಾಗಿ ಮೂಡುವ ಹಾಗೆ ಅಪ್‌ಲೋಡ್ ಮಾಡುವುದು. ಅಸ್ಪಷ್ಟ ಚಿತ್ರಗಳು ಕಂಡುಬಂದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. (ಉದಾ: ಸೆಲ್ಫಿ ಫೋಟೋ)
- ಮೊದಲು ಅಭ್ಯರ್ಥಿಗಳು ತಮ್ಮ ವೈಯಕ್ತಿಕ ಮಾಹಿತಿಯನ್ನು ತುಂಬುವುದು. ತದನಂತರ ವೈಯಕ್ತಿಕ ಮಾಹಿತಿಯು ಸರಿ ಇದೆಯೇ ಎಂಬುದನ್ನು ಪರಿಶೀಲಿಸಿಕೊಂಡು ಹುದ್ದೆಯನ್ನು ಆಯ್ಕೆಮಾಡುವುದು. ವೈಯಕ್ತಿಕ ಮಾಹಿತಿಯಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ಹುದ್ದೆಯ ಆಯ್ಕೆಯ ಮೊದಲು ಸರಿಪಡಿಸಿಕೊಳ್ಳುವುದು. ಹುದ್ದೆಯ ಆಯ್ಕೆ ನಂತರ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಹುದ್ದೆಯ ಆಯ್ಕೆಯ ಸಂದರ್ಭದಲ್ಲಿ ಹುದ್ದೆಗೆ ಅನುಗುಣವಾಗಿ ಚಾಲಕ/ಚಾಲಕ-ಕಂ-ನಿವಾಹಕ/ ನಿರ್ವಾಹಕರ ಪರವಾನಗಿ ವಿವರಗಳನ್ನು ಸರಿಯಾಗಿ ನಮೂದಿಸುವುದು.
- ಹುದ್ದೆಯ ವಿವರಗಳನ್ನು ಭರ್ತಿಮಾಡಿದ ನಂತರ ಹುದ್ದೆಗೆ ಅನುಗುಣವಾಗಿ ಅಂಚೆ ಕಛೇರಿ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಡೌನ್‌ಲೋಡ್ ಮಾಡಿಕೊಂಡ ಅಂಚೆ ಕಛೇರಿ ಚಲನ್ ನೊಂದಿಗೆ ತೆರಳಿ ಅಂಚೆ ಕಛೇರಿಯ ಚಲನ್‌ನಲ್ಲಿ ನಮೂದಾಗಿರುವ ಮೊತ್ತವನ್ನು ಪಾವತಿಸಿ, ಅಂಚೆ ಕಛೇರಿ ಮೊಹರಿನೊಂದಿಗೆ ಸ್ವೀಕೃತಿಯನ್ನು ಪಡೆಯುವುದು. ನಿಮ್ಮ ಅರ್ಜಿ ಸಂಖ್ಯೆ ಸರಿಯಾಗಿದೆಯೇ ಎಂಬುದನ್ನು ಸ್ವೀಕೃತಿ ಪತ್ರದಲ್ಲಿ ಖಚಿತ ಪಡಿಸಿಕೊಳ್ಳುವುದು.
- ಅಂಚೆ ಕಛೇರಿಯಲ್ಲಿ ಪಾವತಿಸಿದ 2 ದಿನಗಳ ನಂತರ ನಿಮ್ಮ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.
- ಚಾಲಕ/ಚಾ.ಕಂ.ನಿರ್ವಾಹಕ ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಆಯ್ಕೆಯಲ್ಲಿ ಮೊದಲ ಆದ್ಯತೆಯನ್ನು ನಮೂದಿಸುವುದು. ಇಲ್ಲವಾದಲ್ಲಿ ನಿಮ್ಮ ಮೊದಲ ಆದ್ಯತೆಯನ್ನು ಚಾಲಕ ಹುದ್ದೆಯಾಗಿರುತ್ತದೆ ಎಂದು ಭಾವಿಸಲಾಗುತ್ತದೆ.
- ಹುದ್ದೆಯನ್ನು ಆಯ್ಕೆ ಮಾಡುವ ಮೊದಲು ನಿಮ್ಮ ವಿವರಗಳ ಬದಲಾವಣೆ ಬಯಸಿದಲ್ಲಿ Edit Application Option ಅನ್ನು ಉಪಯೋಗಿಸತಕ್ಕದ್ದು. ಹುದ್ದೆಯ ಆಯ್ಕೆಯ ನಂತರ ಯಾವದೇ ಬದಲಾವಣೆಗೆ ಅವಕಾಶವಿರುವುದಿಲ್ಲ.

\